ಬರುತ್ತಿದ್ದವನೊಬ್ಬ ಏನೆಂದು ವಿಚಾರಿಸಿ, 'ನಿನ್ನ ಮಗ ಕೆರೆಯ ಬಂಡೆಯ ಮೇಲೆ ಕುಳಿತವ್ನೆ' ಎಂದು ಹೇಳಿದ್ದ. ಹಾಗಾಗಿ ಮುಳ್ಕಟ್ಟ, ಕಳೆದ ಆರು ದಿನಗಳಿಂದ ಹೋದಂತೆ ಸೀದಾ ಕೆರೆಯ ಕಡೆ ಹೊರಟಿದ್ದ.

ಕೆರೆಯ ಬಳಿ ಬಂದಾಗ ಅವನು ಅದೇ ಬಂಡೆಯ ಮೇಲೆ ಕುಳಿತಿದ್ದ.

'ಮಗ ಗೊದ್ದೆ, ಆಟೊಂದ್ ಯೋಳೀವ್ನಿ. ತರ್ಗಾ ಬಂದ್ಬುಟ್ಯಾ ಇಲ್ಗೆ' ಎನ್ನುತ್ತ ಅವನನ್ನು ಸಮೀಪಿಸಿದ. ಆದರೆ ಅವನು ಕೆರೆಯೊಳಗೆ ಸೊಂಟದುದ್ದದ ನೀರಿನಲ್ಲಿ ನಿಂತು ಮೂಗಿಡಿದು ಮುಳುಗೇಳಿ ಸೂರ್ಯನಿಗೆ ತರ್ಪಣ ಬಿಡುತ್ತಿದ್ದ ಏಳೆಂಟು ಮಂದಿ ಬ್ರಾಹ್ಮಣರನ್ನು ಆಸಕ್ತಿ, ಕುತೂಹಲದಿಂದ ನೋಡುತ್ತಿದ್ದ. ಕಳೆದ ಆರು ದಿನಗಳಿಂದಲೂ ಅವನನ್ನು ಕರೆದೊಯ್ಯಲು ಬಂದಿದ್ದಾಗಲೂ ಗೊದ್ಲೆ ಇಂದಿನಂತೆ ಬ್ರಾಹ್ಮಣರು ಸೂರ್ಯನಿಗೆ ತರ್ಪಣ ಬಿಡುವುದನ್ನೇ ನೋಡುತ್ತಾ ಕುಳಿತದ್ದು ಮುಳ್ಕಟ್ಟನಿಗೆ ನೆನಪಿಗೆ ಬಂದು ಅವನ ಭುಜ ಹಿಡಿದು ಅಲುಗಾಡಿಸಿ ಪುನಃ 'ಎಲ ಗೊದ್ಲೆ' ಎಂದ.

ಅವನ ಕಡೆ ಕತ್ತೆತ್ತಿಯೂ ನೋಡದೆ 'ಅಪ್ಪಯ್ಯ, ಅಲ್ನೋಡು ಅವ್ರು ಹೆಂಗ್ ಮಾಡ್ತಾರೆ' ಎಂದು ಅತ್ತ ಕಡೆ ಕೈ ತೋರಿಸಿದ.

